# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ-3/ಎ.3/ಎಂ.ಬಿ.ಎ/ಎಂ.ಸಿ.ಎ/ಸಂ.ನ/2023-2024

ಜ್ಞಾನಭಾರತಿ
ಬೆಂಗಳೂರು-56

**ದಿನಾಂಕ: 09-02-2024**

## ಅಧಿಸೂಚನೆ

**ವಿಷಯ: 2023-24ನೇ ಶೈಕ್ಷಣಿಕ ಸಾಲಿಗೆ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳಿಗೆ ಸಂಯೋಜನೆ ನವೀಕರಿಸುವ ಬಗೆಗೆ.**

**ಉಲ್ಲೇಖ: 1. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಸೀಟ್ ಮ್ಯಾಟ್ರಿಕ್ಸ್ (ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 229 ಟಿಇಸಿ 2023 ದಿನಾಂಕ:28.12.2023)**

**2. ಕುಲಪತಿಯವರ ಅನುಮೋದನೆ ದಿನಾಂಕ: 07-02-2024.**

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 17 ಮತ್ತು 18ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಗೆ ನಮೂದಿಸಿರುವ ಕಾಲೇಜುಗಳಿಗೆ ಅವುಗಳಲ್ಲಿ ಅಸ್ತಿತ್ವದಲ್ಲಿರುವ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು 2023-24ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕ್ರ.ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸ್ | ವಿದ್ಯಾರ್ಥಿ ಪ್ರಮಾಣ |
|---|---|---|---|
| 1. | ಆಚಾರ್ಯ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, 1ನೇ ಅಡ್ಡರಸ್ತೆ, 1ನೇ ಹಂತ, ಪೀಣ್ಯ, ಕೈಗಾರಿಕಾ ನಗರ, ಬೆಂಗಳೂರು -58 | ಎಂ.ಬಿ.ಎ<br>ಎಂ.ಸಿ.ಎ | 240 (ಇನ್ನೂರ ನಲವತ್ತು)<br>60 (ಅರವತ್ತು) |
| 2. | ಎ.ಎಂ.ಸಿ ಕಾಲೇಜು, 18ನೇ ಕಿ.ಮೀ. ಬನ್ನೇರುಘಟ್ಟ ರಸ್ತೆ, ಬೆಂಗಳೂರು-83 | ಎಂ.ಬಿ.ಎ.<br>ಎಂ.ಸಿ.ಎ. | 180 (ನೂರ ಎಂಭತ್ತು)<br>60 (ಅರವತ್ತು) |
| 3. | ಎ.ಐ.ಎಂ.ಎಸ್. ಐ.ಬಿ.ಎಸ್. ಬಿಸಿನೆಸ್ ಸ್ಕೂಲ್ (ಆಕ್ಟೀವ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೆಜ್ಮೆಂಟ್ ಸ್ಟಡೀಸ್ ಇಂಟರ್‌ನ್ಯಾಷನಲ್ ಬಿಸಿನೆಸ್ ಸ್ಕೂಲ್), ನಂ. 235-ಇ1, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, 3ನೇ ಫೇಸ್, ಹೊಸೂರು ರಸ್ತೆ, ಬೆಂಗಳೂರು – 560 099 | ಎಂ.ಬಿ.ಎ. | 180 (ನೂರ ಎಂಭತ್ತು) |
| 4. | ಬೆಂಗಳೂರು ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.8/35, ಆರ್.ವಿ. ಇಂಜಿನಿಯರಿಂಗ್ ಕಾಲೇಜು ಎದುರು, ಮೈಸೂರು ರಸ್ತೆ, ಬೆಂಗಳೂರು-65. | ಎಂ.ಬಿ.ಎ. | 180 (ನೂರ ಎಂಭತ್ತು) |
| 5. | ಕ್ರೈಸ್ಟ್ ಅಕಾಡೆಮಿ ಇನ್ಸಿಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಕ್ರೈಸ್ಟ್ ನಗರ, ಹುಲ್ಲಹಳ್ಳಿ, ಬೇಗೂರು-ಕೊಪ್ಪ ರಸ್ತೆ, ಸಕ್ಕಲವಾರ ಅಂಚೆ, ಬೆಂಗಳೂರು-560 083 (ಸರ್ಕಾರದ ಆದೇಶ ಸಂಖ್ಯೆ: ಇಡಿ 254 ಯುಬಿವಿ 2023 ದಿನಾಂಕ: 06-11-2023) | ಎಂ.ಬಿ.ಎ.<br>ಎಂ.ಸಿ.ಎ. | 120 (ನೂರ ಇಪ್ಪತ್ತು)<br>60 (ಅರವತ್ತು) |

| ಕ್ರ.ಸಂ. | ಕಾಲೇಜಿನ ಹೆಸರು ಮತ್ತು ವಿಳಾಸ | ಕೋರ್ಸ್ | ವಿದ್ಯಾರ್ಥಿ ಪ್ರಮಾಣ |
|---|---|---|---|
| 6. | ಸಿಟಿ ಕಾಲೇಜು,<br>27/2, 33ನೇ ಕ್ರಾಸ್, 2ನೇ ಮೈನ್, 7ನೇ ಬ್ಲಾಕ್,<br>ಜಯನಗರ, ಬೆಂಗಳೂರು-82 | ಎಂ.ಬಿ.ಎ. | 216 (ಇನ್ನೂರ ಹದಿನಾರು) |
| 7. | ದಯಾನಂದ ಸಾಗರ್ ಕಲೆ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಶ್ಯಾವಿಗೆ ಮಲ್ಲೇಶ್ವರ ಹಿಲ್ಸ್, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು-78.<br>(ಸರ್ಕಾರದ ಆದೇಶ ಸಂಖ್ಯೆ: ಇಡಿ 287 ಯುಬಿವಿ 2023 ದಿನಾಂಕ: 07-11-2023) | ಎಂ.ಬಿ.ಎ.<br>ಎಂ.ಸಿ.ಎ. | 240 (ಇನ್ನೂರ ನಲವತ್ತು)<br>120 (ನೂರಾ ಇಪ್ಪತ್ತು) |
| 8. | ಧನ್ವಂತ್ರಿ ಅಕಾಡೆಮಿ ಫಾರ್ ಮ್ಯಾನೇಜ್ಮೆಂಟ್ ಸ್ಟಡೀಸ್, ಸರ್ವೆ ನಂ.39/1, ವಿನಾಯಕನಗರ, ಚಿಕ್ಕಬಾಣವಾರ ರೈಲ್ವೆ ಸ್ಟೇಷನ್, ಹೆಸರುಘಟ್ಟ ರಸ್ತೆ, ಚಿಕ್ಕಬಾಣವಾರ, ಬೆಂಗಳೂರು-560 090 | ಎಂ.ಬಿ.ಎ. | 180 (ನೂರ ಎಂಭತ್ತು) |
| 9. | ಡಾನ್ ಬಾಸ್ಕೊ ಇನ್ಸ್ಟಿಟ್ಯೂಟ್ ಆಫ್ ಬಯೋಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಕುಂಬಳಗೂಡು, ಮೈಸೂರು ರಸ್ತೆ, ಬೆಂಗಳೂರು -560 074. | ಎಂ.ಬಿ.ಎ. | 120 (ನೂರ ಇಪ್ಪತ್ತು) |
| 10. | ಈಸ್ಟ್ ವೆಸ್ಟ್ ಕಾಲೇಜ್ ಆಫ್ ಮ್ಯಾನೇಜ್ಮೆಂಟ್, ನಂ.63, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ, ಬೆಂಗಳೂರು-91. | ಎಂ.ಬಿ.ಎ.<br>ಎಂ.ಸಿ.ಎ. | 150 (ನೂರ ಐವತ್ತು)<br>120 (ನೂರ ಇಪ್ಪತ್ತು) |
| 11. | ಜಿ.ಟಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ನಂ.10/15, ಮಾಗಡಿ ರಸ್ತೆ, ಸುಂಕದಕಟ್ಟೆ, ವಿಶ್ವನೀಡಂ ಅಂಚೆ, ಬೆಂಗಳೂರು-091 | ಎಂ.ಬಿ.ಎ.<br>ಎಂ.ಸಿ.ಎ. | 120 (ನೂರ ಇಪ್ಪತ್ತು)<br>60(ಅರವತ್ತು) |
| 12. | ಗ್ಲೋಬಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೆಜ್ಮೆಂಟ್ ಅಂಡ್ ಸೈನ್ಸ್, ನಂ.6, 3ನೇ ಕ್ರಾಸ್, ಡಿ ರಸ್ತೆ, ಐಡಿಯಲ್ ಹೋಮ್ ಟೌನ್‌ಷಿಪ್, 2ನೇ ಫೇಸ್, ರಾಜರಾಜೇಶ್ವರಿನಗರ, ಬೆಂಗಳೂರು-560 098 | ಎಂ.ಬಿ.ಎ.<br>ಎಂ.ಸಿ.ಎ. | 120 (ನೂರ ಇಪ್ಪತ್ತು)<br>120 (ನೂರ ಇಪ್ಪತ್ತು) |
| 13. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು,<br>ನಂ.5, 3ನೇ ಮುಖ್ಯರಸ್ತೆ, 7ನೇ ಕ್ರಾಸ್, ಆರ್.ಪಿ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-560040 | ಎಂ.ಬಿ.ಎ. | 60 (ಅರವತ್ತು) |
| 14. | ಹರ್ಷ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.129/47/1-7, ವರದನಾಯಕನಹಳ್ಳಿ, ತ್ಯಾಮಗೊಂಡ್ಲು ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 123<br>(ಸರ್ಕಾರದ ಆದೇಶ ಸಂಖ್ಯೆ: ಇಡಿ 167 ಯುಬಿವಿ 2023 ದಿನಾಂಕ: 24-08-2023) | ಎಂ.ಬಿ.ಎ.<br>ಎಂ.ಸಿ.ಎ. | 180 (ನೂರ ಎಂಭತ್ತು)<br>120 (ನೂರ ಇಪ್ಪತ್ತು) |
| 15. | ಹಿಲ್ ಸೈಡ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ನಂ.9, ರಘುವನಹಳ್ಳಿ, ಕನಕಪುರ ಮೈನ್ ರಸ್ತೆ, ಬೆಂಗಳೂರು -560 062. | ಎಂ.ಬಿ.ಎ. | 60 (ಅರವತ್ತು) |

original 43

**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸಿಎ-3/ಎ3/ಸಂ.ಸ/2023-24

ಜ್ಞಾನಭಾರತಿ
ಬೆಂಗಳೂರು-560 056
**ದಿನಾಂಕ: 23-08-2023**

**ಅಧಿಸೂಚನೆ**

**ವಿಷಯ : 2023-24ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಿಸುವ ಬಗೆಗೆ.**

**ಉಲ್ಲೇಖ: 1. ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ: ಎಸಿಎ-3:ಸಂ.ಸ: 2023-24 ದಿನಾಂಕ: 15-05-2023.**

**2. ಕುಲಪತಿಯವರ ಅನುಮೋದನೆ ದಿನಾಂಕ: 19-08-2023.**

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ **2000**ದ **59**ನೇ ಪ್ರಕರಣದ **17**ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ವಿಶ್ವವಿದ್ಯಾಲಯವು, **2023-24**ನೇ ಸಾಲಿಗೆ ಬೆಂಗಳೂರಿನ **ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್**, ನಡೆಸುತ್ತಿರುವ ಕೆಳಕಂಡ ಕೋರ್ಸಿಗೆ/ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

| ಕೋರ್ಸು *(Programme)* | ವಿಷಯ, ಶಿಸ್ತಿನ/ಮೂಲ ವಿಷಯಗಳು *(Subject, Discipline / Core subjects)* | *Programme* ಆಧಾರಿತ ವಿದ್ಯಾರ್ಥಿ ಪ್ರಮಾಣ |
|---|---|---|
| **ಬಿ.ಬಿ.ಎ.** | **ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ** | **30 (ಮೂವತ್ತು)** |
| **ಬಿ.ಕಾಂ.** | **ವಿಶ್ವವಿದ್ಯಾಲಯದ ಪರಿನಿಯಮಾವಳಿಯ** | **60 (ಅರವತ್ತು)** |

*ಉಲ್ಲೇಖ(1)ರ ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ ತಿಳಿಸಲಾಗಿರುವಂತೆ, ಕೋರ್ಸುಗಳ ವಿದ್ಯಾರ್ಥಿ ಪ್ರಮಾಣವನ್ನು Discipline or Core subjects ಆಧಾರದ ಬದಲಾಗಿ Programme ಆಧಾರಿತ ವಿದ್ಯಾರ್ಥಿ ಪ್ರಮಾಣವೆಂದು ನಿಗದಿಪಡಿಸಲಾಗಿರುತ್ತದೆ.*

***ವಿ.ಸೂ:*** ***2023-24ನೇ ಸಾಲಿನ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಲಗತ್ತಿಸಿದೆ. ಕಾಲೇಜುಗಳಿಗೆ ಸಿಂಡಿಕೇಟು ನಿಗಧಿಪಡಿಸಿದ ವಿದ್ಯಾರ್ಥಿ ಪ್ರಮಾಣದೊಂದಿಗೆ ಮಾತ್ರ ಸಂಯೋಜನೆಯನ್ನು ನವೀಕರಿಸಲಾಗಿದೆ. ಕಾಲೇಜು 15 ದಿನಗಳ ಒಳಗಾಗಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ನಮೂದಿಸಿರುವ ಕೊರತೆಗಳನ್ನು ಸರಿದೂಗಿಸಿಕೊಂಡು ಉತ್ತಮ ಪಡಿಸಿಕೊಂಡಿರುವ ಬಗ್ಗೆ ಹಾಗೂ ನ್ಯೂನ್ಯತೆಗಳನ್ನು ಸಂಪಡಿಸಿಕೊಂಡಿರುವ ಕುರಿತು ಅನುಸರಣಾ ವರದಿಯನ್ನು ನೀಡತಕ್ಕದ್ದು. ಇಲ್ಲವಾದಲ್ಲಿ ಮುಂದಿನ ಶೈಕ್ಷಣಿಕ ವರ್ಷದ ಸಂಯೋಜನಾ ನವೀಕರಣದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.***

**ಷರತ್ತುಗಳು:**

1. ಸ್ಥಳೀಯ ವಿಚಾರಣಾ ಸಮಿತಿಯು ನಮೂದಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
2. ***ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಇ 2021 ದಿನಾಂಕ: 12-02-2021ರಲ್ಲಿ ಸೂಚಿಸಿರುವಂತೆ ಕಾಲೇಜುಗಳು ಮುಂದಿನ ಎರಡು ವರ್ಷಗಳ ಒಳಗಾಗಿ ಸ್ಥಳೀಯ ವಿಚಾರಣ ಸಮಿತಿಯ ವರದಿಯಲ್ಲಿ ನಮೂದಿಸಲಾಗಿರುವ ಎಲ್ಲಾ ಎಂಟು Defined Parameters ಗಳನ್ನು ಪೂರೈಸಲು ಕ್ರಮವಹಿಸತಕ್ಕದ್ದು.***
3. **ಸರ್ಕಾರವು ನಿರ್ದೇಶಿಸಿರುವಂತೆ ಸಂಯೋಜಿತ ಕೋರ್ಸುಗಳಿಗೆ ಕಡ್ಡಾಯವಾಗಿ ಸರ್ಕಾರದ UUCMS ಪೋರ್ಟಲ್ ಮೂಲಕವೇ ಪ್ರವೇಶಾತಿಯನ್ನು ಮಾಡತಕ್ಕದ್ದು.**
4. ನಿಗದಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯ ಅಂಗೀಕಾರ ನೀಡುವುದಿಲ್ಲ.
5. ಯಾವುದೇ ಕೋರ್ಸಿಗೆ/ಕೋರ್ಸುಗಳಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿಯಿಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
6. ಸದರಿ ಪದವಿ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಲ್ಪಿಸುವಾಗ ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ಮೀಸಲಾತಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
7. Open electiveಗೆ ಸಂಬಂಧಪಟ್ಟ ಹಾಗೆ, ಪ್ರತಿ ಸಂಯೋಜಿತ ಕಾಲೇಜಿನ, ಒಟ್ಟು ಅನುಮೋದಿತ ಕೋರ್ಸ್-ಕಾಂಬಿನೇಷನ್‌ಗಳಲ್ಲಿನ ಪ್ರತಿ ವಿಷಯದ ವಿದ್ಯಾರ್ಥಿ ಪ್ರಮಾಣ (Intake) ಪ್ರಸ್ತುತ ಅನುಮೋದಿತ ವಿದ್ಯಾರ್ಥಿ ಪ್ರಮಾಣದ 50% ಮೀರದಂತೆ ಕ್ರಮ ವಹಿಸುವುದು.